## ನಿವೇದನೆ

# ಮಕ್ಕಳ ಬದುಕನ್ನು ಸುರಕ್ಷಿತವಾಗಿಸೋಣ ಶೋಷಣೆ ನಿಗ್ರಹಕ್ಕೆ ಕೈಜೋಡಿಸೋಣ

**ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ ಅಪರಾಧಕೃತ್ಯಗಳ ನಿಯಂತ್ರಣಕ್ಕೆ 'ಪೋಕ್ಸೊ' ಕಾಯ್ದೆಯನ್ನು ರೂಪಿಸಲಾಗಿದೆ. ಅದರ ಅನುಸಾರ ಮಕ್ಕಳ ಲೈಂಗಿಕ ಚಿತ್ರ–ದೃಶ್ಯಗಳನ್ನು ವೀಕ್ಷಿಸುವುದು, ಅವುಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳುವುದೂ ಶಿಕ್ಷಾರ್ಹ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.**

ಲೈಂಗಿಕ ಅಪರಾಧಗಳಿಂದ ಮಕ್ಕಳನ್ನು ರಕ್ಷಿಸುವ ಸಲುವಾಗಿ ರೂಪುಗೊಂಡ 'ಪೋಕ್ಸೊ' (ಪ್ರೊಟೆಕ್ಷನ್ ಆಫ್ ಚಿಲ್ಡ್ರನ್ ಫ್ರಮ್ ಸೆಕ್ಷುಯಲ್ ಅಫೆನ್ಸಸ್) ಕಾಯ್ದೆ ಜಾರಿಗೆ ಬಂದು ಹನ್ನೆರಡು ವರ್ಷಗಳು ಕಳೆದಿವೆ. ಮಕ್ಕಳ ಮೇಲೆ ನಡೆಯುವ ಲೈಂಗಿಕ ಅಪರಾಧಗಳನ್ನು, ಶೋಷಣೆಗಳನ್ನು ಮತ್ತು ಅತ್ಯಾಚಾರಗಳನ್ನು ಪರಿಣಾಮಕಾರಿಯಾಗಿ ತಡೆಯುವುದು ಮತ್ತು ಮಕ್ಕಳನ್ನು ಇಂತಹ ಹೇಯ ಕೃತ್ಯಗಳಿಗೆ ಬಳಸಿಕೊಂಡವರನ್ನು ಕಠಿಣ ಶಿಕ್ಷೆಗೆ ಗುರಿಪಡಿಸುವುದು ಈ ಕಾಯ್ದೆಯ ಉದ್ದೇಶ.

ಮಕ್ಕಳ ಹಕ್ಕುಗಳನ್ನು ರಕ್ಷಿಸುವುದರ ಜೊತೆಗೆ ಅವರ ಸುರಕ್ಷತೆಯನ್ನು ಖಾತರಿಪಡಿಸುವ ಆಶಯವನ್ನು ಹೊಂದಿರುವ ಈ ಕಾಯ್ದೆಯ ವ್ಯಾಪ್ತಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಈಚೆಗೆ ಮಹತ್ವದ ತೀರ್ಪು ನೀಡಿದೆ. ಮಕ್ಕಳ ಲೈಂಗಿಕ ಚಿತ್ರ–ದೃಶ್ಯಗಳನ್ನು ವೀಕ್ಷಿಸುವುದು, ಅಂಥವುಗಳನ್ನು ಹೊಂದಿರುವುದು ಹಾಗೂ ಅವುಗಳನ್ನು ಹೊಂದಿರುವುದರ ಬಗ್ಗೆ ಸಂಬಂಧಪಟ್ಟವರಿಗೆ ವರದಿ ಮಾಡದೇ ಇರುವುದು ಅಪರಾಧ ಎಂಬುದನ್ನು ಕೋರ್ಟ್ ತನ್ನ ತೀರ್ಪಿನಲ್ಲಿ ಸ್ಪಷ್ಟಪಡಿಸಿದೆ. ಮೊಬೈಲ್ ಫೋನ್ ಮತ್ತು ಇಂಟರ್ನೆಟ್ ಸೌಲಭ್ಯ ವ್ಯಾಪಕವಾಗಿ ಬಳಕೆಯಾಗುತ್ತಿರುವ ಈ ಸಂದರ್ಭವನ್ನು ದೃಷ್ಟಿಯಲ್ಲಿ ಇರಿಸಿಕೊಂಡು ನೋಡಿದಾಗ ಇದರ ಮಹತ್ವ ಮನವರಿಕೆ ಆಗುತ್ತದೆ.

ಮಕ್ಕಳು ಇರುವ ಲೈಂಗಿಕ ಚಿತ್ರ–ದೃಶ್ಯಗಳನ್ನು ತನ್ನ ಮೊಬೈಲ್ ಫೋನ್‌ಗೆ ಡೌನ್‌ಲೋಡ್ ಮಾಡಿಕೊಂಡ ಆರೋಪದಡಿ 28 ವರ್ಷ ವಯಸ್ಸಿನ ಹರೀಶ್ ಎಂಬಾತನ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಮದ್ರಾಸ್ ಹೈಕೋರ್ಟ್ ರದ್ದುಗೊಳಿಸಿತ್ತು. ಅಂತಹ ದೃಶ್ಯಗಳನ್ನು, ಚಿತ್ರಗಳನ್ನು ಡೌನ್‌ಲೋಡ್ ಮಾಡಿ ಇಟ್ಟುಕೊಂಡ ಮಾತ್ರಕ್ಕೆ ಅದು ಅಪರಾಧ ಆಗುವುದಿಲ್ಲ ಎಂದು ಕೋರ್ಟ್ ಹೇಳಿತ್ತು. ಮದ್ರಾಸ್ ಹೈಕೋರ್ಟ್‌ನ ಈ ಆದೇಶವನ್ನು ಸುಪ್ರೀಂ ಕೋರ್ಟ್ ಈಗ ಅಸಿಂಧುಗೊಳಿಸಿದೆ.

'ಮಕ್ಕಳನ್ನು ಲೈಂಗಿಕವಾಗಿ ದುರ್ಬಳಕೆ ಮಾಡಿಕೊಳ್ಳುವುದು ಬಹಳ ವ್ಯಾಪಕವಾಗಿದೆ. ಇದು ಜಗತ್ತಿನಾದ್ಯಂತ ವಿವಿಧ ಸಮುದಾಯಗಳನ್ನು ಪಿಡುಗಾಗಿ ಕಾಡುತ್ತಿದೆ. ಭಾರತದಲ್ಲಿ ಇದು ಗಂಭೀರ ಕಳವಳಕ್ಕೆ ಕಾರಣವಾಗಿದೆ' ಎಂದು ಹೇಳಿರುವ ಸುಪ್ರೀಂ ಕೋರ್ಟ್, ಪೋಕ್ಸೊ ಕಾಯ್ದೆಯ ಸೆಕ್ಷನ್ 15 ಅನ್ನು ಇಡೀ ಕಾಯ್ದೆಯ ಒಟ್ಟಾರೆ ಆಶಯದೊಂದಿಗೆ ಜೋಡಿಸುವ ಕೆಲಸವನ್ನು ಮಾಡಿದೆ. ಅಂದರೆ, ಈ ಸೆಕ್ಷನ್‌ನ ವ್ಯಾಪ್ತಿ ದೊಡ್ಡದಿದೆ ಎಂಬುದನ್ನು ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿದೆ.

ಮಕ್ಕಳ ಲೈಂಗಿಕ ದೃಶ್ಯ, ಚಿತ್ರಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳದೆ, ಅವುಗಳನ್ನು ಇಂಟರ್ನೆಟ್ ಮೂಲಕ ವೀಕ್ಷಿಸುವುದು, ಹಂಚಿಕೊಳ್ಳುವುದು ಅಥವಾ ಪ್ರದರ್ಶಿಸುವುದು ಅಪರಾಧ ಆಗುತ್ತದೆಯೇ ಎಂಬ ಪ್ರಶ್ನೆಗೂ ಸುಪ್ರೀಂ ಕೋರ್ಟ್ ಉತ್ತರ ನೀಡಿದೆ. ಇಂಟರ್ನೆಟ್ ಮೂಲಕ ವೀಕ್ಷಿಸುವಾಗ ಆರೋಪಿಗೆ ಅಂತಹ ವಸ್ತು–ವಿಷಯದ ಮೇಲೆ 'ನಿರಂತರವಾದ ನಿಯಂತ್ರಣ ಇತ್ತು' ಎಂದಾದರೆ, ಅದು ಕೂಡ ಪೋಕ್ಸೊ ಕಾಯ್ದೆಯ ಅಡಿಯಲ್ಲಿ ಹೇಳಿರುವ 'ಹೊಂದಿರುವಿಕೆ'ಯೇ ಆಗುತ್ತದೆ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ. ಈ ಬಗೆಯ ಅಪರಾಧಗಳ ಬಗ್ಗೆ ಸ್ಪಷ್ಟವಾದ ವ್ಯಾಖ್ಯಾನ ನೀಡುವುದರೊಂದಿಗೆ, ಮಕ್ಕಳ ಲೈಂಗಿಕ ದೃಶ್ಯ, ಚಿತ್ರಗಳಿಗೆ ಸಂಬಂಧಿಸಿದ ನಿಯಮಗಳನ್ನು ಮತ್ತಷ್ಟು ಬಿಗಿಗೊಳಿಸಿರುವ ಕ್ರಮ ಸ್ವಾಗತಾರ್ಹ.

ರಾಜ್ಯಸಭೆಯ ಸಮಿತಿಯೊಂದು ಶಿಫಾರಸು ಮಾಡಿರುವಂತೆ, ತಾಂತ್ರಿಕ ಹಾಗೂ ಸಾಂಸ್ಥಿಕ ಕ್ರಮಗಳನ್ನು ಇನ್ನಷ್ಟು ಬಿಗಿಗೊಳಿಸಬೇಕು ಮತ್ತು ಕ್ರಮಗಳನ್ನು ಬಹಳ ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರಬೇಕು ಎಂದು ಕೂಡ ಕೋರ್ಟ್ ತಾಕೀತು ಮಾಡಿದೆ. ಮಕ್ಕಳ ಲೈಂಗಿಕ ಚಿತ್ರ, ದೃಶ್ಯಗಳನ್ನು ವ್ಯಕ್ತಿಯು ಅಳಿಸಿಹಾಕದಿದ್ದರೆ, ನಾಶಪಡಿಸದಿದ್ದರೆ ಅಥವಾ ಅಂಥವುಗಳ ಬಗ್ಗೆ ಸಂಬಂಧಪಟ್ಟವರಿಗೆ ವರದಿ ಮಾಡದಿದ್ದರೆ, ಆ ವ್ಯಕ್ತಿಗೆ ಆ ವಸ್ತು–ವಿಷಯಗಳನ್ನು ಇನ್ನೊಬ್ಬರ ಜೊತೆ ಹಂಚಿಕೊಳ್ಳುವ ಉದ್ದೇಶ ಇತ್ತು ಎಂಬ ತೀರ್ಮಾನಕ್ಕೆ ಬರಲು ಅದು ಆಧಾರವಾಗುತ್ತದೆ ಎಂದು ಸುಪ್ರೀಂ ಕೋರ್ಟ್ ವ್ಯಾಖ್ಯಾನಿಸಿದೆ. ಕಾಯ್ದೆಯ ಸೆಕ್ಷನ್‌ಗಳನ್ನು ಬಹಳ ಸೀಮಿತ ವ್ಯಾಪ್ತಿಯಲ್ಲಿ ವ್ಯಾಖ್ಯಾನಿಸಬಾರದು ಎಂದು ಕೂಡ ಅಧೀನ ನ್ಯಾಯಾಲಯಗಳಿಗೆ ತಿಳಿಹೇಳಿದೆ.

ಮಕ್ಕಳ ಲೈಂಗಿಕ ದೃಶ್ಯ, ಚಿತ್ರಗಳ ವಿಚಾರವಾಗಿ ವಿವಿಧ ವೇದಿಕೆಗಳು ಹೆಚ್ಚಿನ ಜಾಗರೂಕತೆ ವಹಿಸಬೇಕು ಹಾಗೂ ಅಗತ್ಯ ಎದುರಾದಾಗ ಪೊಲೀಸರಿಗೆ ವರದಿ ಮಾಡಬೇಕು ಎಂಬ ಸೂಚನೆ ಪಾಲನೆಯಾಗುವಂತೆ ನೋಡಿಕೊಳ್ಳುವುದು ಸಮಾಜದ ಪ್ರತಿಯೊಬ್ಬರ ಜವಾಬ್ದಾರಿ. ಸಮಗ್ರವಾದ ಲೈಂಗಿಕ ಶಿಕ್ಷಣ ಯೋಜನೆಯನ್ನು ಜಾರಿಗೆ ತರುವಂತೆಯೂ ಸರ್ಕಾರಕ್ಕೆ ಕೋರ್ಟ್ ಸೂಚನೆ ನೀಡಿದೆ. ನಮ್ಮ ನೀತಿ ನಿರೂಪಕರು ಈ ದಿಸೆಯಲ್ಲಿ ಗಂಭೀರವಾಗಿ ಯೋಚಿಸಬೇಕು ಮತ್ತು ದೃಢವಾದ ಹೆಜ್ಜೆ ಇಡಬೇಕು. ಮಕ್ಕಳ ಬದುಕನ್ನು ಹೆಚ್ಚು ಸುರಕ್ಷಿತವಾಗಿಸಲು ಪೋಷಕರು, ನೆರೆಹೊರೆಯವರು, ಶಿಕ್ಷಕರು, ಸ್ಥಳೀಯ ಮುಖಂಡರು ಕೈಜೋಡಿಸಬೇಕು, ಇದಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು.

■ ಎನ್. ಉದಯಕುಮಾರ್


ಈಶ್ವರ್